ಪ್ರಜಾವಾಣಿ

Wednesday, March 31st, 2010

# ಕೃಷಿ: ಹೆಚ್ಚು ಬಂಡವಾಳ ಅಗತ್ಯ

**ಬೆಂಗಳೂರು:**‘ಕೃಷಿ ಕ್ಷೇತ್ರವೂ ಸ್ಪರ್ಧಾತ್ಮಕ ಹಾಗೂ ವಾಣಿಜ್ಯೀಕರಣದೆಡೆ ಮುಖ ಮಾಡುತ್ತಿರುವುದರಿಂದ, ಕ್ಷೇತ್ರದ ಬೆಳವಣಿಗೆಗೆ ಸರ್ಕಾರ ಹೆಚ್ಚು ಬಂಡವಾಳ ತೊಡಗಿಸುವ ಅಗತ್ಯವಿದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಜಿ. ಚೆಂಗಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಇತ್ತೀಚೆಗೆ ನಗರದ ಜೈನ್ ವಿವಿಯಲ್ಲಿ ‘ಭಾರತದ ಕೃಷಿ ಉದ್ಯಮದಲ್ಲಿ ಹೊಸ ಹೆಜ್ಜೆಗಳು’ ಕುರಿತ ರಾಷ್ಟ್ರೀಯ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ನಿರ್ವಹಣಾ ವಿಭಾಗ ಈ ಕಾರ್ಯಾಗಾರವನ್ನು ಆಯೋಜಿಸಿತ್ತು.

ಪ್ರಚಲಿತ ವಿದ್ಯಮಾನಗಳಿಂದ ಕೃಷಿ ಆರ್ಥಿಕ ಬೆಳವಣಿಗೆ ಕುಂಠಿತಗೊಂಡು ಕೃಷಿಕ್ಷೇತ್ರ ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ ಚರ್ಚಿಸಲಾಯಿತು.